ಒ.ಎಸ್.ನಂಬ್ರ: 177/2009
ಪಿ.ಡಬ್ಲ್ಯೂ: 1

ದಿನಾಂಕ: 05-11-2016 ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.
ಪಾಟೀ ಸವಾಲು: ಶ್ರೀ ಎಸ್.ಎಂ.ಎಸ್. ವಕೀಲರಿಂದ

1ನೇ ವಾದಿ ನನ್ನ ಹೆಂಡತಿಯ ಅಕ್ಕ. ಆಕೆಗೆ ಮದುವೆಯಾಗಿದ್ದು 4 ಜನ ಮಕ್ಕಳು ಇದ್ದಾರೆ. 2ನೇ ವಾದಿ ನನ್ನ ಹೆಂಡತಿ ನಮಗೆ ಇಬ್ಬರು ಮಕ್ಕಳು. ಮೃತ 3ನೇ ವಾದಿ ನನ್ನ ಹೆಂಡತಿಯ ಅಣ್ಣ. 4ನೇ ವಾದಿ ನನ್ನ ಹೆಂಡತಿಯ ಅಕ್ಕನಾದ ಹೇಮಲತಾ ಶೆಟ್ಟಿಯವರ ಮಗ. ಆಕೆ ತೀರಿಹೋಗಿರುತ್ತಾಳೆ. 4ನೇ ವಾದಿ ಕಾರ್ಕಳದ ಬೈಲೂರಿನಲ್ಲಿ ವಾಸವಿದ್ದಾರೆ. ಬಸ್ರೂರು ಗ್ರಾಮದ ಗುಂಡಿಗೋಳಿಯಲ್ಲಿ ವಾದಿ 1 ಮತ್ತು 2ರವರು ವಾಸವಿದ್ದು ಬೇರೆಯವರು ಬಂದು ಹೋಗುತ್ತಾ ಇರುತ್ತಾರೆ. ದಾವಾ ಎ ರಿಂದ ಸಿ ಶೆಡ್ಯೂಲ್ ಆಸ್ತಿ 18 ಸೆಂಟ್ಸು ಆಗಿದ್ದು ದಾವಾ ಬಿ ಶೆಡ್ಯೂಲ್ ಆಸ್ತಿ 18 ಸೆಂಟ್ಸು ಆಸ್ತಿಯ ಪೂರ್ವಕ್ಕಿದೆ. ದಾವಾ ಎ ಯಿಂದ ಸಿ ಶೆಡ್ಯೂಲ್ ಆಸ್ತಿ ಸ್ವಲ್ಪ ಎತ್ತರದಲ್ಲಿದ್ದು ಡಿ ಶೆಡ್ಯೂಲ್ ಆಸ್ತಿ ತಗ್ಗಿನಲ್ಲಿದೆ. ದಾವಾ ಎ ಯಿಂದ ಡಿ ಶೆಡ್ಯೂಲ್ ಆಸ್ತಿಗಳಿಗೆ ಒಂದೇ ಧರೆ ಬೇಲಿ ಇದೆ ಎಂದರೆ ಸರಿಯಲ್ಲ. ದಾವಾ ಜಮೀನುಗಳಿಗೆ ಪ್ರತ್ಯೇಕ ಪ್ರತ್ಯೇಕವಾದ ಧರೆ ಬೇಲಿ ಇದೆ. ನಾನು ನಿವೃತ್ತ ಬ್ಯಾಂಕ್ ಅಧಿಕಾರಿ. ನಿವೃತ್ತಿ ಹೊಂದುವ ಪೂರ್ವದಲ್ಲಿ ನಾನು ಮುಂಬಯಿಯಲ್ಲಿ ವಿಜಯಾ ಬ್ಯಾಂಕ್ ಶಾಖೆಯಲ್ಲಿ ಕೆಲಸ ಮಾಡಿರುತ್ತೇನೆ. ಹೆಚ್ಚಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲೇ ಕೆಲಸ ಮಾಡಿರುತ್ತೇನೆ. ನನ್ನ ಸ್ವಂತ ಊರು ಆನಗಳ್ಳಿಯಲ್ಲಿದ್ದು ದಾವಾ ಜಮೀನುಗಳಿಂದ 2 ಕಿ.ಮೀ. ದೂರದಲ್ಲಿದೆ. ನಾನು 2000ನೇ ಇಸವಿಯಲ್ಲಿ ನಿವೃತ್ತಿ ಹೊಂದಿರುತ್ತೇನೆ. ನನಗೆ 1975ರಲ್ಲಿ ಮದುವೆಯಾಗಿದ್ದು ಆಗಿನಿಂದ ನಾನು ಬಸ್ರೂರು ಗ್ರಾಮಕ್ಕೆ ಬಂದು ಹೋಗುತ್ತಾ ಇದ್ದೇನೆ. 1ನೇ ಪ್ರತಿವಾದಿ ಸುಬ್ಬಕ್ಕ ಶೆಡ್ತಿಯವರನ್ನು ಭೂಮಾಲೀಕರು ಎಂದು ತೋರಿಸಿ ಭೂನ್ಯಾಯ ಮಂಡಳಿಯಲ್ಲಿ ಅರ್ಜಿ ಸಲ್ಲಿಸಿದ್ದಾರೆಂದರೆ ಸರಿ . ನಿಪಿ:1 ಮತ್ತು 2ರಂತೆ ಭೂನ್ಯಾಯ ಮಂಡಳಿಯಲ್ಲಿ ಆದೇಶ ಆಗುವಾಗ ಸುಬ್ಬಕ್ಕ ಶೆಡ್ತಿಯವರು ಜೀವಂತ ಇದ್ದು ಅವರೇ ಭೂಮಾಲೀಕರಾಗಿದ್ದರು. ಆ ಸಮಯದಲ್ಲಿ ನಾನು ಬ್ಯಾಂಕ್ ನೌಕರನಾಗಿದ್ದು ಬೇರೆ ಊರಿನಲ್ಲಿದ್ದೆ. ಈ ದಾವೆ ಹಾಕುವ ಪೂರ್ವದಲ್ಲಿ ದಾವಾ ಭೂಮಿಗಳನ್ನು ಅಳತೆ ಮಾಡಿಸಬೇಕೆಂದು ಸ್ಥಳಕ್ಕೆ ಹೋದಾಗ ಪ್ರತಿವಾದಿಯರು ಅವರಿಗೆ ನೋಟೀಸ್ ಬರಲಿಲ್ಲ ಎಂದು ಆಕ್ಷೇಪ ಮಾಡಿರುತ್ತಾರೆ. ದಾವಾ ಜಮೀನಿನ ಸುತ್ತಲೂ ಪ್ರತಿವಾದಿಯರೇ ಗಿಡ ಬೆಳೆಸಿ ಬೇಲಿ ಹಾಕಿರುತ್ತಾರೆಂದರೆ ಸಾಕ್ಷಿ ಯಾರು ಗಿಡ ಬೆಳೆಸಿದ್ದಾರೆಂದು ಗೊತ್ತಿಲ್ಲ. ನಾನು ನೋಡುವಾಗ ಧರೆ ಬೇಲಿ ಮತ್ತು ಗಿಡಗಳು ಅಲ್ಲಿತ್ತು. ನಾವು ಬೇಲಿ ಹಾಕಿದ್ದಿಲ್ಲ. ದಾವಾ ಎ ಶೆಡ್ಯೂಲ್

ಆಸ್ತಿಯಲ್ಲಿ ಒಂದು ಮತ್ತು ಮತ್ತು ದಾವಾ ಬಿ ಶೆಡ್ಯೂಲ್ ಆಸ್ತಿಯಲ್ಲಿ ಒಂದು ಮನೆ ಮಾತ್ರ ಇದೆ. 4 ಮನೆಗಳು ಇವೆ ಎಂದರೆ ಸರಿಯಲ್ಲ. ದಾವಾ ಎ ಯಿಂದ ಡಿ ಶೆಡ್ಯೂಲ್ ಆಸ್ತಿಗಳಲ್ಲಿ ತೆಂಗು, ಅಡಿಕೆ ಕೃಷಿ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ದಾವಾ ಸಿ ಶೆಡ್ಯೂಲ್ ಆಸ್ತಿಯಲ್ಲಿ ಮಾತ್ರ ತೆಂಗಿನ ಮರಗಳಿವೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಈಗ ಕೆಲವು ಫೋಟೋಗಳನ್ನು ತೋರಿಸಲಾಗಿ ಅವುಗಳನ್ನು ನೋಡಿ ನನಗೆ ಎಲ್ಲಿಯ ಫೋಟೋಗಳು ಎಂದು ಸರಿಯಾಗಿ ಹೇಳಲಾಗುವುದಿಲ್ಲ ಎನ್ನುತ್ತಾರೆ. 1ನೇ ಪ್ರತಿವಾದಿಯ ಮನೆಯನ್ನು ನಾನು ನೋಡಿರುತ್ತೇನೆ. ಸಾಕ್ಷಿಗೆ ಈಗ ಒಂದು ಫೋಟೋವನ್ನು ತೋರಿಸಲಾಗಿ ಅದರಲ್ಲಿ ಕಂಡು ಬರುವ ಮನೆ 1ನೇ ಪ್ರತಿವಾದಿಯ ಮನೆ ಎಂದು ಸೂಚಿಸಲಾಗಿ ಸಾಕ್ಷಿ ಅದರಲ್ಲಿ ನನಗೆ ಗುರುತಿಸಲು ಸಾಧ್ಯ ಇಲ್ಲ ಎನ್ನುತ್ತಾರೆ. ನಾನು ಯಾವತ್ತೂ ದಾವಾ ಜಮೀನಿಗೆ ಹೋದದ್ದೇ ಇಲ್ಲ ಎಂದರೆ ಸರಿಯಲ್ಲ. ಆದರ ಕಾರಣ ಫೋಟೋವನ್ನು ಗುರುತಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಜಮೀನುಗಳಿಗೆ ಸಂಬಂಧಪಟ್ಟಂತೆ ನಕ್ಷೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಆದರೆ ನಮ್ಮ ವಕೀಲರಿಗೆ ಕೊಟ್ಟಿರುತ್ತೇನೆ. ದಾವಾ ಎ ಯಿಂದ ಡಿ ಶೆಡ್ಯೂಲ್ ಆಸ್ತಿಗಳಿಗೆ ಪ್ರತ್ಯೇಕ ಪ್ರತ್ಯೇಕವಾದ ನಕ್ಷೆ ಇಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ಗಂಡ ಸದಾನಂದ ಹೆಗ್ಡೆ ಈಗಲೂ ಜೀವಂತ ಇದ್ದು ಗುಂಡಿಗೋಳಿಯಲ್ಲೇ ವಾಸ ಇದ್ದಾರೆ. ಅವರು ಕುಂದಾಪುರದಲ್ಲಿ ತಹಶೀಲ್ದಾರರಾಗಿ ಕೆಲಸ ಮಾಡಿದ್ದಾರೆಂದರೆ ಸರಿ. ಪ್ರತಿವಾದಿಯರು ತಲಾ 18 ಸೆಂಟ್ಸು ಜಮೀನಿಗೆ ಭೂನ್ಯಾಯ ಮಂಡಳಿಯಲ್ಲಿ ಬೇರೆ ಬೇರೆ ಅರ್ಜಿ ಸಲ್ಲಿಸಿದ್ದಾರೆಂದರೆ ಎಷ್ಟು ಸೆಂಟ್ಸಿಗೆ ಅರ್ಜಿ ಕೊಟ್ಟಿದ್ದಾರೆಂದು ನನಗೆ ಗೊತ್ತಿಲ್ಲ. ಭೂನ್ಯಾಯ ಮಂಡಳಿಯಲ್ಲಿ ಅವರ ಅರ್ಜಿಗಳ ಮೇಲೆ ತೀರ್ಪು ಆಗಿದೆ ಎಂದರೆ ಸರಿ. 1ನೇ ವಾದಿಯ ಗಂಡ ಆ ಸಮಯದಲ್ಲಿ ತಹಶೀಲ್ದಾರರಾಗಿದ್ದು ಭೂಮಿಯನ್ನು ಅಳತೆ ಮಾಡದೆ ದುರುದ್ದೇಶದಿಂದ ಪ್ರತಿವಾದಿಯರು ಅರ್ಜಿ ಸಲ್ಲಿಸಿದಷ್ಟು ವಿಸ್ತೀರ್ಣದ ಭೂಮಿಯನ್ನು ಮಂಜೂರು ಮಾಡದೆ ಕಡಿಮೆ ವಿಸ್ತೀರ್ಣಕ್ಕೆ ಮಂಜೂರು ಮಾಡಿಸಿದ್ದಾರೆಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಆ ಸಮಯದಲ್ಲಿ 1ನೇ ವಾದಿಯ ಗಂಡ ಕುಂದಾಪುರದಲ್ಲಿ ತಹಶೀಲ್ದಾರರಾಗಿ ಇರಲಿಲ್ಲ ಎಂದು ನುಡಿಯುತ್ತಾರೆ.

ಹಾಲಾಡಿ ಸೂರ್ಯನಾರಯಣ ಶೆಟ್ಟಿ ಎನ್ನುವವರು ಮೇಲೆ ಹೇಳಿದ ಸದಾನಂದ ಹೆಗ್ಡೆಯವರ ಅಳಿಯ. ಶಾಸಕರಾದ ಹಾಲಾಡಿ ಶ್ರೀನಿವಾಸ ಶೆಟ್ಟಿ ಮೇಲೆ ಹೇಳಿದ ಸೂರ್ಯನಾರಾಯಣ ಶೆಟ್ಟಿಯವರ ಅಣ್ಣ ಎಂದರೆ ಸರಿ. ನಾವು ಪ್ರತಿವಾದಿಯರ ವಿರುದ್ಧ ಸುಳ್ಳು ದಾವೆ ಹಾಕಿದ್ದೇವೆಂದರೆ ಸರಿಯಲ್ಲ. ಈ ದಾವೆಯಲ್ಲಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಹಾಕಿದ ನಂತರ ಕಮಿಷನ್ ನೇಮಕಾತಿಗೆ ಅರ್ಜಿ ಸಲ್ಲಿಸಿದ್ದೇವೆಂದರೆ ಸರಿ. ನಾವು ಇತ್ತೀಚೆಗೆ ದಾವಾ ಜಮೀನುಗಳನ್ನು ಶಾಸಕರ ಬೆಂಬಲದಿಂದ ಪ್ಲಾಟಿಂಗ್ ಮಾಡಿಸಿದ್ದೇವೆಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಪ್ರತಿವಾದಿಯರೇ ಪ್ಲಾಟಿಂಗ್ ಮಾಡಿಸಿದ್ದಾರೆಂದು ನುಡಿಯುತ್ತಾರೆ. ಪ್ರತಿವಾದಿಯರಿಗೆ

ದಾವಾ ಜಮೀನುಗಳನ್ನು ಅಳತೆ ಮಾಡಿಸುವ ಅವಶ್ಯಕತೆಯೇ ಇರಲಿಲ್ಲ ಮತ್ತು ಅವರು ಕಂದಾಯ ಇಲಾಖೆಗೆ ಯಾವುದೇ ಅರ್ಜಿಯನ್ನು ಕೂಡಾ ನೀಡಿಲ್ಲ ಎಂದರೆ ಸರಿಯಲ್ಲ. ಮೃತ ಸುಬ್ಬಕ್ಕ ಶೆಡ್ತಿಯರ ಎಲ್ಲಾ ಕುಟುಂಬದವರನ್ನು ಈ ದಾವೆಯಲ್ಲಿ ವಾದಿಯರಾಗಿ ಕಾಣಿಸಿಲ್ಲ ಎಂದರೆ ಸರಿ. ಸುಬ್ಬಕ್ಕ ಶೆಡ್ತಿಯರ ಕುಟುಂಬದವರೆಲ್ಲಾ ನನಗೆ ಯಾವುದೇ ಅಧಿಕಾರ ಪತ್ರವನ್ನು ಕೊಟ್ಟಿರುವುದಿಲ್ಲ. ದಾವಾ ಜಮೀನುಗಳಲ್ಲಿ ನನಗೆ ಯಾವುದೇ ರೀತಿ ಹಿಸೆ ಹಕ್ಕು ಇಲ್ಲ ಎಂದರೆ ಸರಿ . ದಾವಾ ಡಿ ಶೆಡ್ಯೂಲ್ ಆಸ್ತಿ ವಾದಿಯರ ಕುಟುಂಬಕ್ಕೆ ಸೇರಿದ ಆಸ್ತಿಯಲ್ಲ ಎಂದರೆ ಸರಿಯಲ್ಲ. ದಾವಾ ಡಿ ಶೆಡ್ಯೂಲ್ ಆಸ್ತಿ ಸಂಜೀವ ಶೆಟ್ಟಿಯವರಿಗೆ ಸೇರಿದ ಮೂಲಿ ಆಸ್ತಿ ಎಂದರೆ ಸಾಕ್ಷಿ ಶಶಿಕಲಾ ಶೆಡ್ತಿಯವರು ಅದರ ಮೂಲಿದಾರರಾಗಿದ್ದು ಸುಬ್ಬಕ್ಕ ಶೆಡ್ತಿ ಮೂಲಗೇಣಿದಾರರಾಗಿದ್ದರು ಎನ್ನುತ್ತಾರೆ. ಮೇಲೆ ಹೇಳಿದ ಶಶಿಕಲಾ ಶೆಡ್ತಿ ಸುಬ್ಬಕ್ಕ ಶೆಡ್ತಿಯವರ ಕುಟುಂಬದವರಲ್ಲ ಎಂದರೆ ಸರಿ . ಸುಬ್ಬಕ್ಕ ಶೆಡ್ತಿ ಮೂಲಗೇಣಿದಾರರು ಎಂದು ಹೇಳುವ ಬಗ್ಗೆ ನನ್ನ ಬಳಿ ಈಗ ಯಾವ ದಾಖಲೆ ಇಲ್ಲ. ಸುಬ್ಬಕ್ಕ ಶೆಡ್ತಿಯವರು ಡಿ ಶೆಡ್ಯೂಲ್ ಆಸ್ತಿ ಬಗ್ಗೆ ಡಿಕ್ಲರೇಶನ್ ಅರ್ಜಿ ಸಲ್ಲಿಸಿಲ್ಲ. ನಿಪಿ:7 ಮತ್ತು 8 ಆರ್‌ಟಿಸಿಗಳಲ್ಲಿ ಕಂಡು ಬರುವ ಎಂಟ್ರಿಗಳನ್ನು ಸುಬ್ಬಕ್ಕ ಶೆಡ್ತಿಯ ವಾರಸುದಾರರ ಸಂತತಿ ನಕ್ಷೆಯ ಆಧಾರದಲ್ಲಿಯೇ ಮಾಡಲಾಗಿದೆ. ನಿಪಿ:7 ಮತ್ತು 8ರಲ್ಲಿ ಮೂಲಗೇಣಿದಾರರು ಎಂದು ಎಲಿಸ್ಲಿಯೂ ಕಾಣಿಸಿಲ್ಲ ಮತ್ತು ಮೂಲಿ ಹಕ್ಕು ಎಂದು ಕಾಣಿಸಿದೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಹೇಳಲಾಗುವುದಿಲ್ಲ ಎನ್ನುತ್ತಾರೆ. ಸುಬ್ಬಕ್ಕ ಶೆಡ್ತಿ ಡಿ ಶೆಡ್ಯೂಲ್ ಆಸ್ತಿಯ ಮೂಲಗೇಣಿದಾರರು ಮತ್ತು ಮೂಲಿದಾರರು ಅಲ್ಲ ಎಂದರೆ ಸರಿಯಲ್ಲ. ಕಂದಾಯ ಇಲಾಖೆಯಲ್ಲಿ ನಾವು ಶಾಸಕರ ಪ್ರಭಾವ ಬೀರಿ ಅಕ್ರಮವಾಗಿ ನಿಪಿ:7 ಮತ್ತು 8ರಲ್ಲಿ ಎಂಟ್ರಿ ಮಾಡಿಸಿದ್ದೇವೆಂದರೆ ಸರಿಯಲ್ಲ.

(ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಲಾಗಿ ಸಮಯಾವಕಾಶ ನೀಡಲಾಯಿತು)

ಓ.ಹೇ.ಕೇ.ಸರಿ ಇದೆ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಕುಂದಾಪುರ